**ಪತ್ರಿಕಾ ಪ್ರಕಟಣೆ**

**ಕರ್ನಾಟಕ ರಾಜ್ಯದ ವಾಣಿಜ್ಯ ತೆರಿಗೆಗಳ ಇಲಾಖೆಯಿಂದ ರಾಜ್ಯಾದ್ಯಂತ ಪರೀಕ್ಷಾರ್ಥ ಖರೀದಿ ಅಭಿಯಾನ**

ವಾಣಿಜ್ಯ ತೆರಿಗೆಗಳ ಇಲಾಖೆಯು ಜನವರಿ ಮತ್ತು ಫೆಬ್ರವರಿ–2020ರ ಮಾಹೆಗಳಲ್ಲಿ ಪರೀಕ್ಷಾರ್ಥ ಖರೀದಿ ಕಾರ್ಯಾಚರಣೆ ನಡೆಸಿ, ಸೂಕ್ತ ಮಾರಾಟ ಬಿಲ್ಲುಗಳನ್ನು ನೀಡದ 1,052 ವರ್ತಕರಿಂದ **ರೂ.1.87 ಕೋಟಿ** ದಂಡವನ್ನು ವಸೂಲಿ ಮಾಡಲಾಗಿದೆ. ಸದರಿ ಕಾರ್ಯಾಚರಣೆಯು ವರ್ತಕರು ಸರಕುಗಳನ್ನು ಮಾರಾಟ ಮಾಡುವಾಗ ಬಿಲ್ಲುಗಳನ್ನು ನೀಡುವ ಅನುಪಾಲನೆಯನ್ನು ಖಾತ್ರಿಪಡಿಸಿಕೊಳ್ಳುವ ಪ್ರಸ್ತುತ ಪ್ರಯತ್ನಗಳ ಒಂದು ಭಾಗವಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳು ಸರಕುಗಳನ್ನು ಖರೀದಿಸುವ ಗ್ರಾಹಕರ ಸೋಗಿನಲ್ಲಿ ಅಂಗಡಿಗಳಿಗೆ ಭೇಟಿ ನೀಡಿರುತ್ತಾರೆ. ಅದರಂತೆ, ಜನವರಿ ಮತ್ತು ಫೆಬ್ರವರಿ–2020ರ ಮಾಹೆಗಳಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ, ಮಂಡ್ಯ, ಮಂಗಳೂರು, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಹುಬ್ಬಳ್ಳಿ, ಶಿರಸಿ, ಕಲಬುರಗಿ, ಬೀದರ್, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ ಪ್ರದೇಶಗಳಲ್ಲಿ ಪರೀಕ್ಷಾರ್ಥ ಖರೀದಿ ನಡೆಸಿ, 1,052 ಪ್ರಕರಣಗಳಲ್ಲಿ ಮಾರಾಟ ಬಿಲ್ಲುಗಳನ್ನು ನೀಡದ ವರ್ತಕರಿಗೆ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆಯಡಿಯಲ್ಲಿ ದಂಡ ವಿಧಿಸಿ ಸಂಗ್ರಹಿಸಲಾಗಿದೆ.

ಪರೀಕ್ಷಾರ್ಥ ಖರೀದಿಯ ನಂತರ ಮಾರಾಟ ಬಿಲ್ಲು ನೀಡದ ವರ್ತಕರ ವ್ಯಾಪಾರ ಸ್ಥಳಗಳನ್ನು ಅಗತ್ಯವೆನಿಸಿದಲ್ಲಿ ನಿಯಮಾನುಸಾರ ತಪಾಸಣೆಗೊಳಪಡಿಸಲಾಗುವುದು. ಈ ರೀತಿ ತಪಾಸಣೆ ಕೈಗೊಂಡ ಸಂಬಂಧ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ತೆರಿಗೆ ವಂಚನೆಯಲ್ಲಿ ತೊಡಗಿರುವುದನ್ನು ಪತ್ತೆ ಹಚ್ಚಿ, **ರೂ.25.20** ಲಕ್ಷ ತೆರಿಗೆ ಸಂಗ್ರಹಿಸಲಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆಯು ಮುಂಬರುವ ದಿನಗಳಲ್ಲಿ ಈ ರೀತಿಯ ಪರೀಕ್ಷಾರ್ಥ ಖರೀದಿ ಕಾರ್ಯಾಚರಣೆಯನ್ನು ರಾಜ್ಯಾದ್ಯಂತ ನಡೆಸಲಿದ್ದು, ಮಾರಾಟಕ್ಕೆ ಸೂಕ್ತ ಬಿಲ್ಲುಗಳನ್ನು ನೀಡದ ವರ್ತಕರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಿದೆ. ಮುಂದುವರೆದು, ಎಲ್ಲಾ ಗ್ರಾಹಕರು ವಸ್ತುಗಳ ಖರೀದಿಗೆ ಸೂಕ್ತ ಬಿಲ್ಲನ್ನು ನೀಡುವಂತೆ ಒತ್ತಾಯಿಸಲು ಈ ಮೂಲಕ ತಿಳಿಸಲಾಗಿದೆ.

29.2.2020

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು